ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಬಿ ಕೆ ಪಿ ರವರಿಂದಃ-</u>

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದಿಃ**28.12.2017** ರ ಅಸಲು ಕ್ರಯದ ಕರಾರು ಪತ್ರ ನಿಪಿ-**1** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-**1** ರಲ್ಲಿ ಇರುವ ತಮ್ಮ ಹಾಗೂ ಪ್ರತಿವಾದಿಗಳ ಸಹಿಗಳನ್ನು, ಸಾಕ್ಷಿದಾರರ ಸಹಿಗಳನ್ನು ಮತ್ತು ಪತ್ರಬರಹಗಾರರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**1**(ಎ) ಯಿಂದ ನಿಪಿ-**1**(ಎಫ್) ಎಂದು ಗುರುತಿಸಲಾಯಿತು. ನಮೂನೆ **3** ಅನ್ನು ನಿಪಿ-**2** ಎಂದು, ಋಣಭಾರ ರಾಹಿತ್ಯ ಪ್ರಮಾಣಪತ್ರವನ್ನು ನಿಪಿ-**3** ಎಂದು, ಪ್ರತಿವಾದಿಗಳಿಗೆ ಕಳುಹಿಸಿದ ವಕೀಲರ ನೋಟೀಸಿನ ಕಛೇರಿ ಪ್ರತಿ ನಿಪಿ-**4** ಎಂದು, ಪ್ರತ್ಯುತ್ತರ ನೋಟೀಸು ನಿಪಿ-**5** ಎಂದು ಗುರುತಿಸಲಾಯಿತು.

ಹೆಚ್ಚಿನ ದಾಖಲೆಗಳನ್ನು ನಿಶಾನೆಗೆ ಒಳಪಡಿಸಲು ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಅನುಪಮ ಲಕ್ಷ್ಮಿ. ಬಿ)**
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.